## ಗುಣಮಟ್ಟದ ಧಾರಾವಾಹಿಗಳು ಬೇಕು

‘ಎದೆ ತುಂಬಿ ಹಾಡಿದೆನು’, ‘ಕವಿ ನಮನ’, ‘ಎಂದೂ ಮರೆಯದ ಹಾಡು’ ಸೇರಿ ಕೆಲವು ಅಪೂರ್ವ ಕಾರ್ಯಕ್ರಮಗಳನ್ನು ನೀಡಿದ್ದ ಕಲರ್ಸ್ (ಈ ಟಿ.ವಿ.) ಈಗ ಪ್ರಸಾರ ಮಾಡುತ್ತಿರುವ ಧಾರಾವಾಹಿ ಮತ್ತು ‘ಬಿಗ್‌ಬಾಸ್’ ರಿಯಾಲಿಟಿ ಶೋ ಅದು ಸಾಗಿ ಬಂದ ಹಾದಿಗೆ ತಕ್ಕಂತಿಲ್ಲ. ಈ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ರಿಯಾಲಿಟಿ ಶೋ ಮತ್ತು ಧಾರಾವಾಹಿಗಳನ್ನು ಗುಣಮಟ್ಟದ ಮಾನದಂಡದಲ್ಲಿ ಒಂದೊಂದಾಗಿ ಎಲಿಮಿನೇಟ್ ಮಾಡುತ್ತಾ ಹೋದರೆ, ಕೊನೆಗೆ ಉಳಿಯುವುದೇನು? ವಾಹಿನಿ ಪರಾಮರ್ಶೆ ನಡೆಸಲಿ.

—ಪಿ.ಜೆ. ರಾಘವೇಂದ್ರ, ಮೈಸೂರು

## ಸೀತಾರಾಮ: ಸೂತ್ರ ಹರಿದ ಗಾಳಿಪಟ

ಕಳೆದ ಹಲವು ತಿಂಗಳಿನಿಂದ ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ‘ಸೀತಾರಾಮ’ ಇತ್ತೀಚೆಗೆ ಸೂತ್ರ ಇಲ್ಲದ ಗಾಳಿಪಟದಂತೆ ಎತ್ತೆತ್ತಲೋ ಸಾಗುತ್ತ ತಲೆನೋವು ತರುತ್ತಿದೆ. ಅನಗತ್ಯವಾಗಿ, ಅನೂಹ್ಯ ರೀತಿಯಲ್ಲಿ ಸಿಹಿಯನ್ನು ಸಾವಿಗೆ ದೂಡಿ ವೀಕ್ಷಕರ ಕೋಪ–ಶಾಪಕ್ಕೆ ಗುರಿಯಾಗಿದೆ. ನಂತರ ಚ್ಯೂಯಿಂಗ್ ಗಂನಂತೆ ಎಳೆಯುತ್ತಿರುವ ‘ಟೈಂ ಪಾಸ್’ ಧಾರಾವಾಹಿಯಾಗಿದೆ. ಶೀಘ್ರ ಸಿಹಿಯ ಪ್ರತಿರೂಪಿ ಸುಬ್ಬಿಯನ್ನು ದೇಸಾಯಿ ಮನೆಗೆ ಸೇರಿಸಿ ಸುಬ್ಬಿಯ ರಂಜಿತ ದೃಶ್ಯಗಳನ್ನು ಹೆಣೆಯದಿದ್ದರೆ ಈ ‘ಸೀತಾರಾಮ’ ‘ಗೋತಾರಾಮ’ ಆಗುವುದು ಖಚಿತ.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ಹಳೆಯ ಹಾಡು ಹಾಡು ಮತ್ತೆ...

ಝೀ ಕನ್ನಡ ವಾಹಿನಿಯ ಸುಪ್ರಸಿದ್ಧ ರಿಯಾಲಿಟಿ ಶೋ ‘ಸರಿಗಮಪ’ ನೂತನ ಸರಣಿಯಲ್ಲಿ ಉತ್ತಮ ಗಾಯಕರು ಆಯ್ಕೆಯಾಗಿದ್ದಾರೆ. ಈ ಸ್ಪರ್ಧೆಯಲ್ಲಿ 60ರಿಂದ 80ರ ದಶಕದ ಸಿನಿಮಾ ಹಾಡುಗಳನ್ನು ಹಾಡಿಸುವ ಪ್ರಯತ್ನವನ್ನು ಮಾಡಬೇಕಾಗಿದೆ. ಪ್ರಸಿದ್ಧ ಕವಿಗಳ ಕವಿತೆಗಳನ್ನು ಚಲನಚಿತ್ರಗಳಿಗೆ ಅಳವಡಿಸಿಕೊಂಡ ಉದಾಹರಣೆಗಳು ಬಹಳ ಇವೆ. ದ.ರಾ. ಬೇಂದ್ರೆ ಅವರ ‘ಮೂಡಲ ಮನೆಯ ಮುತ್ತಿನ ನೀರಿನ’, ಕುವೆಂಪು ಅವರ ‘ದೋಣಿ ಸಾಗಲಿ ಮುಂದೆ ಹೋಗಲಿ’, ವಿ. ಸೀತಾರಾಮಯ್ಯ ಅವರ ‘ಎಮ್ಮ ಮನೆಯಂಗಳದಿ’, ಮೈಸೂರು ಮಲ್ಲಿಗೆ ಖ್ಯಾತಿಯ ಕೆ.ಎಸ್. ನರಸಿಂಹಸ್ವಾಮಿ ಅವರ ‘ಇವಳು ಯಾರು ಬಲ್ಲೆ ಏನು’ ಹೀಗೆ ಪಟ್ಟಿ ಬೆಳೆಯುತ್ತದೆ.

ಈ ಗೀತೆಗಳನ್ನು ಹಾಡಿದ ಎಸ್. ಜಾನಕಿ, ಪಿ.ಬಿ. ಶ್ರೀನಿವಾಸ್, ಪಿ. ಸುಶೀಲಾ ಅವರಂತಹ ಅಮೋಘ ಗಾಯಕರನ್ನು ಮರೆಯಲು ಸಾಧ್ಯವಿಲ್ಲ. ಅವರ ಹಾಡುಗಳಿಗೂ ಪ್ರಾಮುಖ್ಯತೆಯನ್ನು ಕೊಟ್ಟು ಸ್ಪರ್ಧಿಗಳಿಂದ ಹಾಡಿಸಿದರೆ ಕಾರ್ಯಕ್ರಮದ ಸೊಗಸು ಹೆಚ್ಚಿಸಿದಂತೆ ಆಗುತ್ತದೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ವಾರದ ಪತ್ರ

## ವ್ಯಕ್ತಿತ್ವಕ್ಕೆ, ಪ್ರಾಮಾಣಿಕತೆಗೆ ಬೆಲೆ ಇಲ್ಲವೆ?

ಪ್ರಾಮಾಣಿಕತೆಗೆ ಇದು ಕಾಲವಲ್ಲ ಎನ್ನುವುದನ್ನು ಕಲರ್ಸ್ ಕನ್ನಡ ವಾಹಿನಿಯ ‘ಬಿಗ್ ಬಾಸ್’ ಕಾರ್ಯಕ್ರಮ ಮತ್ತೊಮ್ಮೆ ಸಾಬೀತುಪಡಿಸಿದೆ. ಕೊನೆಯ ಸುತ್ತಿನ ಎಲಿಮಿನೇಷನ್‌ನಲ್ಲಿ ಇದು ರುಜುವಾತಾಗಿದೆ. ಬಿಗ್‌ಬಾಸ್ ಮನೆಯಲ್ಲಿದ್ದ ಕೊನೆಯ ದಿನದವರೆಗೂ ಧನಾತ್ಮಕ ಧೋರಣೆಹೊಂದಿದ್ದ, ಸದಾ ಮುಗುಳ್ನಗುತ್ತಾ ಪ್ರಾಮಾಣಿಕವಾಗಿ ತನ್ನ ವ್ಯಕ್ತಿತ್ವ ಪ್ರದರ್ಶಿಸಿದ ಸ್ಪರ್ಧಿ ಗೌತಮಿಗೆ ಸ್ಪರ್ಧೆಯಲ್ಲಿ ಉಳಿಯಲಾಗಲಿಲ್ಲ.



ಮಿಡ್ ವೀಕ್ ಎಲಿಮಿನೇಷನ್ ಆಟದಲ್ಲಿ ಅತ್ಯಧಿಕ ಅಂಕ ಗಳಿಸಿದ್ದ ಸ್ಪರ್ಧಿ ಧನರಾಜ್, ಕನ್ನಡಿಯೆದುರು ಆಟದ ಸಾಮಗ್ರಿಯಿರಿಸಿದ ಬಿಗ್ ಬಾಸ್ ತಂಡದವರ ತಪ್ಪಿನಿಂದಾಗಿ ತಾನು ಬೆಲೆ ತೆರುವಂತಾಯಿತು. ಅದರಿಂದಾಗಿ ಮಿಡ್ ವೀಕ್ ಎಲಿಮಿನೇಷನ್‌ನಿಂದ ಎಲ್ಲ ಸ್ಪರ್ಧಿಗಳು ಪಾರಾದರು. ಕನ್ನಡಿಯಲ್ಲಿ ತಾನು ಪ್ರತಿಬಿಂಬವನ್ನು ನೋಡಿ ಆಡಿರುವುದನ್ನು ಪ್ರಾಮಾಣಿಕವಾಗಿ ಹೇಳಿದ ಧನರಾಜ್ ಆಟದಲ್ಲಿ ಗೆದ್ದೂ ಫೈನಲ್ ಪ್ರವೇಶಿಸಲು ಅಸಾಧ್ಯವಾಯಿತು. ಅವರು ಬೇರೆ ಸ್ಪರ್ಧಿಗಳ ಜೊತೆ ವಾಸ್ತವವನ್ನು ಹಂಚಿಕೊಳ್ಳದೇ ಇದ್ದರೆ ‘ಬಿಗ್ ಬಾಸ್’ ತಂಡಕ್ಕೆ ಅಚಾತುರ್ಯದ ಅರಿವಾಗುತ್ತಿರಲಿಲ್ಲ. ವ್ಯಕ್ತಿ–ವ್ಯಕ್ತಿತ್ವದ ನೈಜ ಅನಾವರಣ ಮಾಡುವ ಘೋಷಣೆ ಹೊತ್ತ ಈ ರಿಯಾಲಿಟಿ ಶೋ ಪ್ರಾಮಾಣಿಕತೆಯ ಬೆಲೆಯನ್ನು ಕಳೆದುಕೊಂಡಿದ್ದಂತೂ ನಿಜ!

—ರಮಣ್ ಶೆಟ್ಟಿ ರೆಂಜಾಳ, ಮುಂಬಯಿ

## ಗಮನಸೆಳೆದ ಸಂಕ್ರಾಂತಿ ವಿಶೇಷ

ಚಂದನ ವಾಹಿನಿಯ ‘ಥಟ್ ಅಂತ ಹೇಳಿ’ ಕಾರ್ಯಕ್ರಮದಲ್ಲಿ ಕನಕಪುರದ ರೈತರ ಮನೆ ಹಾಗೂ ಹೊಲಕ್ಕೆ ಹೋಗಿ ಮಾತುಕತೆ ನಡೆಸಿದ್ದು ಚೆನ್ನಾಗಿತ್ತು. ಕೃಷಿಕರ ಜೀವನಾಡಿ ದನಕರುಗಳ ಚಿತ್ರಣದ ಜೊತೆ ಕಿಚ್ಚು ಹಾಯಿಸುವುದು, ಮೆರವಣಿಗೆ, ಬೆಳೆಗಳ ಪೂಜೆ – ಹೀಗೆ ಸುಗ್ಗಿಯ ಅನುಭವವನ್ನು ನಿರೂಪಕ ನಾ. ಸೋಮೇಶ್ವರ ಅದ್ಭುತವಾಗಿ ಹಂಚಿಕೊಂಡರು.

—ಗಂಗಾಧರ್, ಬೆಂಗಳೂರು

## ಮುದ ನೀಡಿದ ಪಿಟೀಲು

ಚಂದನ ವಾಹಿನಿಯ ಇತ್ತೀಚಿನ ‘ಶುಭೋದಯ ಕರ್ನಾಟಕ’ ಕಾರ್ಯಕ್ರಮ ಮುಗಿದ ನಂತರ ಕೃಷ್ಣಮೂರ್ತಿ ಹಾಗೂ ಆದಿತ್ಯ ಅವರ ದ್ವಂದ್ವ ಪಿಟೀಲು ವಾದನ ಪ್ರಸಾರವಾಯಿತು. ಪಿಟೀಲಿನ ಕಛೇರಿ ಸುಶ್ರಾವ್ಯವಾಗಿ ಮೂಡಿ ಬಂತು. ಮನಸ್ಸಿಗೆ ತುಂಬ ಮುದ ನೀಡಿತು.

—ಕಮಲಾರಾವ್, ಬೆಂಗಳೂರು

## ಹೊಣೆಗಾರಿಕೆ ಮರೆತ ಸುದ್ದಿ ವಾಹಿನಿಗಳು

ಒಂದಲ್ಲ ಒಂದು ದುರ್ಘಟನೆಗಳು ಜಗತ್ತಿನಾದ್ಯಂತ ನಡೆಯುತ್ತಲೇ ಇವೆ. ನಮ್ಮ ಸುದ್ದಿ ವಾಹಿನಿಗಳು ಮಾತ್ರ ಅಂತಹ ಸುದ್ದಿಗಳಿಗೆ ರೆಕ್ಕೆ ಪುಕ್ಕ ಕಟ್ಟಿ ಪ್ರಸಾರ ಮಾಡುತ್ತಾ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿವೆ. ಲಾಸ್ ಏಂಜಲೀಸ್ ಬೆಂಕಿ ಅವಘಡ, ರಾಜಕೀಯ ಪಕ್ಷಗಳ ಪರಸ್ಪರ ಕೆಸರೆರಚಾಟ, ಹಸುವಿನ ಮೇಲೆ ಜರುಗಿದ ಹೀನ ಕೃತ್ಯ, ಗವಿಗಂಗಾಧರೇಶ್ವರನ ಮೇಲೆ ಈ ಬಾರಿ ಸೂರ್ಯಕಿರಣ ಬೀಳದೇ ಇರುವುದು – ಹೀಗೆ ತಮಗೆ ಮನ ಬಂದಂತೆ ಸುದ್ದಿಗಳನ್ನು ಅತಿ ರಂಜಿಸಿ ಪ್ರಸಾರ ಮಾಡಿಯೇ ಬಿಟ್ಟರು. ಅದರಲ್ಲಿ ಕೆಲವು ವಾಹಿನಿಗಳ ಅಡಿ ಬರಹಗಳು ತೀವ್ರ ಆಘಾತ ತಂದವು.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಹಳೆ ಸಿನಿಮಾಗಳ ನಿತ್ಯದ ಹಬ್ಬ

ಕನ್ನಡ ಸಿನಿಮಾಗಳ ರಸದೌತಣವನ್ನು ‘ಡಿಂಕಾ ಮೂವೀಸ್’ ಬಡಿಸುತ್ತಿದೆ. ದಿನವಿಡೀ 70 ಮತ್ತು 80ರ ದಶಕದ ಈ ಸಿನಿಮಾಗಳ ವೈವಿಧ್ಯಮಯ ಕಥನಗಳು ಕಣ್ಣು, ಮನಸಿಗೆ ಮೆರುಗು ತುಂಬುತ್ತಿವೆ. ಹಳೆಯ ಕನ್ನಡ ಸಿನಿಮಾಗಳಲ್ಲಿ ಹಬ್ಬದ ಕಲರವವನ್ನು ಕುಟುಂಬಸ್ಥರ ಜೊತೆ ಕುಳಿತು ನೋಡುವುದೇ ಚಂದ.

ಆ ಕಾಲದ ನಟರ ಅಭಿನಯ, ಗೀತೆಯ ಮಾಧುರ್ಯ, ಸಂಭಾಷಣೆ, ಅದ್ಭುತ ಹಾಸ್ಯ ಸನ್ನಿವೇಶಗಳು ಮರೆಯಲಾಗದ ಅನುಭವ. ಒಟ್ಟಾರೆ ತುಂಬಾ ಒಳ್ಳೆಯ ಕಾರ್ಯಕ್ರಮ.

—ಭಾರತೀ ಗಂಗಾಧರ್, ಬೆಂಗಳೂರು